<u>ದಿನಾಂಕ 27.11.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಯು ವಕೀಲರಿಂದಃ</u>

ನಾನು ಬಿ ಎಸ್ ಇ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಪೋಲಿಸ್ ಇಲಾಖೆಯಲ್ಲಿ ಸರ್ಕಾರಿ ನೌಕರನಾಗಿದ್ದೆ. ನಾನು ಎ ಎಸ್ ಐ ಯಾಗಿ 2019 ರಲ್ಲಿ ನಿವೃತ್ತಿಯಾಗಿದ್ದೇನೆ. ನನಗೆ ಇಬ್ಬರು ಹೆಣ್ಣು ಮಕ್ಕಳು, ಅವರೆಂದರೆ ಯೋಗಿತ ಮತ್ತು ರಶ್ಮಿ. ಒಬ್ಬರಿಗೆ 5-6 ವರ್ಷಗಳ ಹಿಂದೆ ಮದುವೆಯಾಗಿರುತ್ತದೆ. ಇನ್ನೊಬ್ಬರಿಗೆ ಮದುವೆಯಾಗಿಲ್ಲ. ನಾನು ಸಹಿ ಮಾಡುವ ಮುನ್ನ ದಾಖಲೆ ಓದಿ ಸಹಿ ಮಾಡುತ್ತೇನೆ. ವಕೀಲರು ವಕಾಲತ್ತನ್ನು ತೋರಿಸಿದಾಗ ಸಾಕ್ಷಿಯು ನನ್ನ ಸಹಿ ಇದೆ ಎಂದು ಹೇಳುತ್ತಾರೆ. ಸದರಿ ವಕಾಲತ್ತನ್ನು ನಿಪಿ-23 ಎಂದು, ಅದರಲ್ಲಿರುವ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ನಿಪಿ-1 ರ ಕರಾರು ಪತ್ರವನ್ನು ತೋರಿಸಿದಾಗ ಸಾಕ್ಷಿಯು ಸಹಿಗಳನ್ನು ಒಪ್ಪುತ್ತಾರೆ. ಅದರಲ್ಲಿರುವ 6 ಸಹಿಗಳನ್ನು ನಿಪಿ-1(ಎಫ್) ಯಿಂದ ನಿಪಿ-1(ಕೆ) ಎಂದು ಗುರುತಿಸಲಾಯಿತು. ನಿಪಿ-1 ರ ಕರಾರು ಪತ್ರವನ್ನು ತೋರಿಸಿದಾಗ ಸಾಕ್ಷಿಯು 2 ನೇ ಪ್ರತಿವಾದಿಯ ಸಹಿಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1(ಸಿ) ಎಂದು ಗುರುತಿಸಲಾಗಿದೆ. ನಿಪಿ-1 ರ ಕರಾರು ಪತ್ರವನ್ನು ನಾನು ಮಾಡಿಕೊಟ್ಟಿರುತ್ತೇನೆ. ಮುಂಗಡವಾಗಿ 10 ಸಾವಿರ ರೂಪಾಯಿಗಳನ್ನು ಪಡೆದಿದ್ದೇನೆಂದರೆ ಸಾಕ್ಷಿಯು ಇಟ್ಟು ಬಿಟ್ಟು ಹೋದರು ಎಂದು ನುಡಿಯುತ್ತಾರೆ. ಅದೇ ದಿನ 2,90,000/- ರೂಪಾಯಿಗಳಿಗೆ ಚೆಕ್ ಅನ್ನು ಕೊಟ್ಟಿದ್ದರು ಎಂದರೆ ಸಾಕ್ಷಿಯು 4-5 ದಿವಸ ಬಿಟ್ಟು ಕೊಟ್ಟು ಎಂದು ನುಡಿಯುುತ್ತಾರೆ. ನಾನು ಈ ಚೆಕ್ ಅನ್ನು ನಗದಿಗಾಗಿ ಬ್ಯಾಂಕಿಗೆ ಹಾಕಿರುತ್ತೇನೆಂದರೆ ಸಾಕ್ಷಿಯು ಅವರೇ ಹಾಕಿರುತ್ತಾರೆಂದು ನುಡಿಯುತ್ತಾರೆ. ಈ ಚೆಕ್ ಹೊನ್ನಪ್ಪರವರಿಗೆ ಸೇರಿದ್ದಾಗಿರುತ್ತದೆ. ಹೊನ್ನಪ್ಪರವರ ಮಗ ಲೋಕೇಶ್ ರವರಿಗೆ ಚೆಕ್ ಸೇರಿದ್ದು ಎಂದರೆ ಸುಳ್ಳು. ಹೊನ್ನಪ್ಪರವರು ನನಗೆ ಲೀಗಲ್ ನೋಟೀಸ್ ಕೊಟ್ಟಿರುತ್ತಾರೆಂದರೆ ಸುಳ್ಳು. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಈ ಲೀಗಲ್ ನೋಟೀಸ್ ಗೆ ನಾನು ಉತ್ತರವನ್ನು ಕೊಟ್ಟಿಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಕರಾರು

ಪತ್ರ ಆದಾಗ ನನ್ನ ಮಕ್ಕಳು ಹೊರದೇಶಕ್ಕೆ ಹೋಗಿರುತ್ತಾರೆ ಕರಾರು ಪತ್ರ ಆದಾಗ ನಾನು ಮತ್ತು ನನ್ನ ಪತ್ನಿ ಮನೆಯಲ್ಲಿದ್ದೆವು ಎಂದರೆ ಸುಳ್ಳು. ಕರಾರು ಆದ ದಿನವೇ ಕರಾರಿನ ಬಗ್ಗೆ ಗೊತ್ತಾಗಿರುತ್ತದೆ.

2. ನಾನು ಪುಟ್ಟಗಿರಿಗೌಡರವರ ಬಳಿ ಸಾಲ ಕೇಳಿದ್ದೆ ಎಂದರೆ ಸುಳ್ಳು. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು.  ದಾವಾ ಆಸ್ತಿಗೆ ನನ್ನ ಹೆಸರು ಬರುತ್ತದೆ. ಅದ್ದರಿಂದ ನಾನೇ ಸಂಪೂರ್ಣ ಮಾಲೀಕ ಎಂದರೆ ನಿಜ. ಬಲವಂತವಾಗಿ ಸಹಿ ಪಡೆದ ಬಗ್ಗೆ ದೂರು ನೀಡಿಲ್ಲ. ಠಾಣೆಯಲ್ಲಿ ಸಾಮಾನ್ಯವಾಗಿ ಬಲವಂತವಾಗಿ ಸಹಿ ಪಡೆಯುತ್ತಾರೆಂದರೆ ಸುಳ್ಳು. ಮಾನವ ಹಕ್ಕು ಕಛೇರಿಯಲ್ಲಿ ಸಿ ಸಿ ಕ್ಯಾಮರಾ ಇದೆ ಎಂದರೆ ಸುಳ್ಳು. ಸುಳ್ಳು ಹಾಜರಾತಿ ಪತ್ರವನ್ನು ಹಾಜರುಪಡಿಸಿರುತ್ತೇನೆಂದರೆ ಸುಳ್ಳು ನಾನು ದಾವಾ ಆಸ್ತಿಯನ್ನು ಮಾರಾಟ ಮಾಡಲು ಸಾಕ್ಷಿದಾರರ ಮನೆಗೆ ಹೋಗಿದ್ದೇನೆಂದರೆ ಸುಳ್ಳು. ಆಗ ಸಾಕ್ಷಿ ಗೋಪಾಲಯ್ಯರವರ ಅಳಿಯನು ಮಾರಾಟದ ಬಗ್ಗೆ ತಿಳಿಸಿದ್ದರಿಂದ ಕರಾರು ಪತ್ರ ಆಗಿದೆ ಎಂದರೆ ಸುಳ್ಳು ಒಟ್ಟು ವ್ಯಾಪಾರ 1 ಗುಂಟೆಗೆ 24,500/- ರಂತೆ ಪೂರ್ತಿ ಜಮೀನಿಗೆ 15,92,000/- ವ್ಯಾಪಾರ ಆಯಿತು ಎಂದರೆ ಸುಳ್ಳು. ದಾವಾ ಆಸ್ತಿ ಪಿತ್ರಾರ್ಜಿತ ಸ್ವತ್ತು ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ನನ್ನ ಬ್ಯಾಂಕ್ ಅಕೌಂಟ್ ಗೆ ಬಂದ ಹಣವನ್ನು ವಾಪಸ್ಸು ಹಾಕಲು ನನಗೆ ಅಕೌಂಟ್ ನಂಬರ್ ಗೊತ್ತಿರಲಿಲ್ಲ. ಆರ್ ಟಿ ಜಿ ಎಸ್ ಮಾಡಬಹುದಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರೆವೆನ್ಯೂ ನಕ್ಷೆ ಮಾಡಿಸಿ ಮತ್ತು 11 ಇ ನಕ್ಷೆ ಮಾಡಿಸಿದ ನಂತರ ಕ್ರಯ ಮಾಡಿಕೊಡಬೇಕಾಗಿತ್ತು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. 2019 ರಲ್ಲಿ ನನ್ನ ಹೆಸರಿಗೆ ಪೋಡಿಯಾಯಿತು ಎಂದರೆ ಸುಳ್ಳು. ಹೆಚ್ಚಿಗೆ ಮಾರಾಟ ಮಾಡಲು ವಾದಿಗೆ ಮೋಸ ಮಾಡುತ್ತಿದ್ದೇನೆಂದರೆ ಸುಳ್ಳು.

ಸಮಯಾವಕಾಶ ಕೋರಿದ್ದು ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**